**ಸಿಸಿ ನಂಃ 1712/2024**

**ಪಿ. ಡಬ್ಲ್ಯು. 1**

**(ಇಂದು ದಿನಾಂಕಃ 07-04-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಎಸ್ ಪಿ ಕೆ ರವರಿಂದಃ**

ನೀವು ಫಿರ್ಯಾದುದಾರ ಕಂಪೆನಿಗೆ ಕೆಲಸಕ್ಕೆ ಸೇರಿ 4 ವರ್ಷಗಳಾಗಿವೆ ಎಂದರೆ ಸರಿ. ಚೆಕ್ಕಿಗೆ ಸಂಬಂಧಿಸಿದ ವ್ಯವಹಾರ ನೀವು ಫಿರ್ಯಾದುದಾರ ಕಂಪೆನಿಗೆ ಕೆಲಸಕ್ಕೆ ಸೇರುವ ಪೂರ್ವದಲ್ಲೇ ಆಗಿರುವ ವ್ಯವಹಾರ ಎಂದರೆ ಸರಿ. ಆರೋಪಿಯು ಸಹ ಒಂದು ಕಂಪೆನಿ ಎಂದರೆ ಸರಿ. ಫಿರ್ಯಾದುದಾರ ಕಂಪೆನಿ ಹಾಗೂ ಆರೋಪಿ ಕಂಪೆನಿಯ ನಡುವೆ ಏನಾದರೂ ಕರಾರು ಆಗಿರುತ್ತದೆಯಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ನಿಮ್ಮ ಕಂಪೆನಿಯೊಂದಿಗೆ ಯಾರಾದರೂ ವ್ಯವಹಾರ ಮಾಡಿದರೆ ಮುಂಗಡವಾಗಿ ಚೆಕ್ಕನ್ನು ತೆಗೆದುಕೊಳ್ಳುವ ಪದ್ಧತಿ ಇದೆ ಎಂದರೆ ಸರಿ.

2. ಒಮ್ಮೆ ಕೊಟ್ಟ ಚೆಕ್ಕು ಅಮಾನ್ಯಗೊಂಡು ವಾಪಾಸು ಬಂದರೆ ಅವರಿಂದ ಪುನಃ ಇನ್ನೊಂದು ಚೆಕ್ಕನ್ನು ಸಾಮಾನ್ಯವಾಗಿ ಪಡೆದುಕೊಳ್ಳುವುದಿಲ್ಲ ಎಂದರೆ ಸರಿ. ಫಿರ್ಯಾದುದಾರ ಕಂಪೆನಿಯು ಆರೋಪಿಯ ವಿರುದ್ಧ 2 ಚೆಕ್ ಅಮಾನ್ಯ ಪ್ರಕರಣಗಳನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಆ ಎರಡು ಪ್ರಕರಣಗಳ ಪೈಕಿ ಈ ಪ್ರಕರಣ ಒಂದಾಗಿದ್ದು ಇನ್ನೊಂದು ಪ್ರಕರಣ ಕಾರವಾರದ ಸಿ.ಜೆ.ಎಮ್ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ.

3. ನಿಮ್ಮ ಪ್ರಕಾರ ನಿಪಿ-1ರ ಚೆಕ್ಕು ಹಾಗೂ ಇನ್ನೊಂದು ಪ್ರಕರಣದ ಚೆಕ್ಕನ್ನು ಆರೋಪಿಯು ಏಕಕಾಲಕ್ಕೆ ಕೊಟ್ಟಿದ್ದಾರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ.

4. ಈ ಪ್ರಕರಣದಲ್ಲಿನ ಚೆಕ್ಕಿನ ದಿನಾಂಕ ಯಾವುದು ಎಂದರೆ ಸಾಕ್ಷಿ 25-06-2019 ಅಂತಾ ಉತ್ತರಿಸುತ್ತಾರೆ. ಇನ್ನೊಂದು ಪ್ರಕರಣದಲ್ಲಿನ ಚೆಕ್ಕಿನ ದಿನಾಂಕ ಎಷ್ಟು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಿಮಗೆ ಈ ಪ್ರಕರಣದಲ್ಲಿನ ಚೆಕ್ಕನ್ನು ಮೊದಲು ಕೊಟ್ಟಿದ್ದಾರೋ ಅಥವಾ ಸಿ.ಜೆ.ಎಮ್ ನ್ಯಾಯಾಲಯದಲ್ಲಿರುವ ಪ್ರಕರಣದಲ್ಲಿನ ಚೆಕ್ಕನ್ನು ಮೊದಲು ಕೊಟ್ಟಿದ್ದಾರೋ ಎಂದರೆ ಸಾಕ್ಷಿ ಈ ಪ್ರಕರಣದ ಚೆಕ್ಕನ್ನು ಮೊದಲು ಕೊಟ್ಟಿರುತ್ತಾರೆ ಅಂತಾ ಉತ್ತರಿಸುತ್ತಾರೆ. ಈ ಪ್ರಕರಣದ ಚೆಕ್ಕನ್ನು ಆರೋಪಿ ಕೊಡುವಾಗಲೇ ಆರೋಪಿಯಿಂದ ನಿಮ್ಮ ಕಂಪೆನಿಗೆ ಬರಬೇಕಾದ ಹಣದ ಮೊತ್ತ ಎಷ್ಟು ಎಂಬುದು ನಿಮಗೆ

ಗೊತ್ತಿತ್ತು ಎಂದರೆ ಸರಿ. ನಿಮ್ಮ ಕಂಪನಿಗೆ ಆರೋಪಿಯಿಂದ ಬರಬೇಕಾದ ಒಟ್ಟು ಬಾಕಿ ಹಣಕ್ಕೆ ಈ ಪ್ರಕರಣದ ಚೆಕ್ಕನ್ನು ತೆಗೆದುಕೊಳ್ಳಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಬಿಲ್ಲುಗಳ ಪ್ರಕಾರ ತೆಗೆದುಕೊಳ್ಳಬೇಕಾಗಿದ್ದು ಪ್ರತ್ಯೇಕ ಚೆಕ್ಕುಗಳನ್ನು ತೆಗೆದುಕೊಂಡಿದ್ದೆವು ಅಂತಾ ಉತ್ತರಿಸುತ್ತಾರೆ. ನಿಪಿ-1ರ ಚೆಕ್ಕನ್ನು ತೆಗೆದುಕೊಳ್ಳುವಾಗ ಇನ್ನೊಂದು ಪ್ರಕರಣದಲ್ಲಿನ ಚೆಕ್ಕಿಗೆ ಸಂಬಂಧಿಸಿದ ಬಿಲ್ಲಿನ ಬಾಕಿ ಹಣ ಎಷ್ಟು ಇತ್ತು ಎಂಬುದು ನಿಮಗೆ ಗೊತ್ತಿರಲಿಲ್ಲ ಎಂದರೆ ಸರಿ.

5. ಫಿರ್ಯಾದುದಾರ ಹಾಗೂ ಆರೋಪಿ ಕಂಪೆನಿಯ ನಡುವೆ ಎಷ್ಟು ವರ್ಷಗಳಿಂದ ವ್ಯವಹಾರ ನಡೆಯುತ್ತಿತ್ತು ಎಂದರೆ ಸಾಕ್ಷಿ 2016-17ರಿಂದ 2019-20 ರ ವರೆಗೆ ನಡೆಯುತ್ತಿತ್ತು ಅಂತಾ ಉತ್ತರಿಸುತ್ತಾರೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಗಿದೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಾರವಾರ.**